# ನೀತಿ ಆಯೋಗ- ಫ್ಲಿಪ್ ಕಾರ್ಟ್ ಸಹಯೋಗದಲ್ಲಿ ಮಹಿಳಾ ಉದ್ಯಮಶೀಲ ಪ್ಲಾಟ್ ಫಾರ್ಮ್ ಬಲವರ್ಧನೆ

ಬೆಂಗಳೂರು, ಜನವರಿ 12, 2021:ಭಾರತದಲ್ಲಿ ಮಹಿಳಾ ಉದ್ಯಮಿಗಳ ಸಮುದಾಯದ ಅನುಭವವನ್ನು ಹೆಚ್ಚಿಸುವ ನಿಟ್ಟಿನಲ್ಲಿ ಭಾರತ ಸರ್ಕಾರದ ನೀತಿ ಆಯೋಗ ಮತ್ತು ಭಾರತದ ಸ್ವದೇಶಿ ಇ-ಕಾಮರ್ಸ್ ಮಾರುಕಟ್ಟೆಯಾಗಿರುವ ಫ್ಲಿಪ್ ಕಾರ್ಟ್ ಮಹಿಳಾ ಉದ್ಯಮಶೀಲತೆಯ ಪ್ಲಾಟ್ ಫಾರ್ಮ್ ಅನ್ನು ಪರಿಷ್ಕರಿಸಿವೆ. ಇದೇ ಮೊದಲ ಬಾರಿಗೆ ಮಹಿಳಾ ಉದ್ಯಮಶೀಲತೆ ಪ್ಲಾಟ್ ಫಾರ್ಮ್ (ಡಬ್ಲ್ಯು ಇಪಿ)ಯಾಗಿದ್ದು, ಏಕೀಕೃತವಾದ ಅಕ್ಸೆಸ್ ಪೋರ್ಟಲ್ ಆಗಿದೆ. ಇದು ಭಾರತದ ವಿವಿಧ ಭಾಗಗಳಲ್ಲಿರುವ ಮಹಿಳಾ ಉದ್ಯಮಿಗಳನ್ನು ತಮ್ಮ ಉದ್ಯಮಶೀಲತೆಯ ಆಕಾಂಕ್ಷೆಗಳನ್ನು ಸಾಕಾರಗೊಳಿಸುವ ನಿಟ್ಟಿನಲ್ಲಿ ಒಗ್ಗೂಡಿಸುತ್ತದೆ. ಈ ಪರಿಷ್ಕರಿಸಲಾಗಿರುವ ಆವೃತ್ತಿಯು ಮಹಿಳಾ ಮಾರ್ಗದರ್ಶಕರಿಗೆ ಸಮಸ್ಯೆ ಇರುವ ಪ್ರದೇಶಗಳಿಗೆ ಸಂಬಂಧಿಸಿದಂತೆ ನಿರ್ದಿಷ್ಟವಾದ ಜ್ಞಾನವನ್ನು ಹೊಂದಿರುವ ಮಾರ್ಗದರ್ಶನ ನೀಡುವ ವೈಶಿಷ್ಟ್ಯತೆಗಳನ್ನು ಒಳಗೊಂಡಿರುತ್ತದೆ. ಇದು FICCI-FLO ನ ಆನ್ ಲೈನ್ ಕಾರ್ಯವಿಧಾನದ ಮೂಲಕ ಶೇ.50 ರಷ್ಟು ಎಂಪವರಿಂಗ್ ಅನ್ನು ಸುಗಮಗೊಳಿಸಲಿದೆ. ಈ ಪ್ಲಾಟ್ ಫಾರ್ಮ್ ನ ಕಲ್ಪನೆಯನ್ನು ಮೊದಲು ಪರಿಚಯಿಸಿದ್ದು ನೀತಿ ಆಯೋಗದ ಸಿಇಒ ಅಮಿತಾಬ್ ಕಾಂತ್ ಅವರು. 2017 ರಲ್ಲಿ ನೀತಿ ಆಯೋಗ ಹೈದ್ರಾಬಾದ್ ನಲ್ಲಿ ನಡೆದ 8 ನೇ ಜಾಗತಿಕ ಉದ್ಯಮಶೀಲತೆ ಶೃಂಗಸಭೆಯ ಅಂತ್ಯದಲ್ಲಿ ಅವರು ಈ ಮಹಿಳಾ ಉದ್ಯಮಶೀಲತೆ ಪ್ಲಾಟ್ ಫಾರ್ಮ್ ಅನ್ನು ಘೋಷಣೆ ಮಾಡಿದ್ದರು. ಇದರ ಪ್ರಮುಖ ವಿಷಯವೆಂದರೆ, ``ಮೊದಲು ಮಹಿಳೆಯರು, ಎಲ್ಲರಿಗೂ ಸಮೃದ್ಧಿ" ಎಂಬುದಾಗಿತ್ತು.

ನೆಟ್ ವರ್ಕಿಂಗ್ ಅವಕಾಶಗಳು ಮತ್ತು ಮಾರ್ಗದರ್ಶಕರ ಕೊರತೆಯ ಪರಿಣಾಮ ಉದ್ಯೋಗ ಮತ್ತು ಕುಟುಂಬವನ್ನು ಸಮತೋಲನಗೊಳಿಸುವ ಸವಾಲುಗಳನ್ನು ಮಹಿಳಾ ಉದ್ಯಮಿಗಳು ಎದರಿಸುತ್ತಿದ್ದಾರೆ. ಈ ಮಹಿಳೆಯರು ಒಗ್ಗೂಡಿದ ಸಂದರ್ಭದಲ್ಲಿ ಅಥವಾ ಸಮುದಾಯಗಳನ್ನು ರಚಿಸಿದ ಸಂದರ್ಭದಲ್ಲಿ ಅವರಿಗೆ ಎದುರಾಗುವ ಸಮಸ್ಯೆಗಳು ಅಥವಾ ಸವಾಲುಗಳನ್ನು ಎದುರಿಸಲು ಅವರು ಉತ್ತಮವಾದ ರೀತಿಯಲ್ಲಿ ಸಜ್ಜುಗೊಳ್ಳುತ್ತಾರೆ. ಸೂಕ್ತ ಮಾರ್ಗದರ್ಶಕರು ಮತ್ತು ವೃತ್ತಿಪರರಿಂದ ಹಂಚಿಕೊಂಡ ಅನುಭವಗಳು ಅವರ ಉತ್ಸಾಹ ಮತ್ತು ಉದ್ಯಮಶೀಲತೆಯ ಮಹತ್ವಾಕಾಂಕ್ಷೆಯನ್ನು ಹೊಸ ಎತ್ತರಕ್ಕೆ ಕೊಂಡೊಯ್ಯುವ ನಿಟ್ಟಿನಲ್ಲಿ ಅವರಿಗೆ ಸಹಾಯ ಮಾಡುತ್ತದೆ.

ಇದರ ಪ್ರಮುಖ ಗುರಿಯೆಂದರೆ, ನೀತಿ ಆಯೋಗ ಮತ್ತು ಫ್ಲಿಪ್ ಕಾರ್ಟ್ ಜಂಟಿಯಾಗಿ ಮಹಿಳಾ ಉದ್ಯಮಿಗಳಿಗೆ `ಸಮುದಾಯ' ಸಂವಹನ ಮತ್ತು ಕಾರ್ಯಗಳಲ್ಲಿ ಸಕ್ರಿಯಗೊಳಿಸಲು ತಂತ್ರಜ್ಞಾನ ಮತ್ತು ಬಳಕೆದಾರರ ಅನುಭವದ ಬಲವನ್ನು ಮುನ್ನಲೆಗೆ ತರುತ್ತದೆ. ಡಬ್ಲ್ಯೂ ಇಪಿ ಸಂಪನ್ಮೂಲಗಳನ್ನು ಸದುಪಯೋಗಪಡಿಸಿಕೊಳ್ಳುವ ನಿಟ್ಟಿನಲ್ಲಿ `ಸಮುದಾಯ'ವನ್ನು ಅತ್ಯಂತ ಸಂವಾದಾತ್ಮಕ, ಲಾಭದಾಯಕ ಹಾಗೂ ಅರ್ಥಗರ್ಭಿತವಾದ ಕ್ಯೂಎನ್ಎ ಪ್ಲಾಟ್ ಫಾರ್ಮ್ ನನ್ನಾಗಿ ಮಾಡುವುದು ಇದರ ಉದ್ದೇಶವಾಗಿದೆ. ಇದರಿಂದಾಗಿ ಮಹಿಳಾ ಉದ್ಯಮಿಗಳು ಫಲಪ್ರದವಾದ ಚರ್ಚೆಗಳಿಗೆ ಮತ್ತು ಜ್ಞಾನವನ್ನು ಹಂಚಿಕೊಳ್ಳಲು ಸಾಧ್ಯವಾಗುತ್ತದೆ. ಅಂತಿಮವಾಗಿ ಭಾರತದ ಮಹಿಳಾ ಉದ್ಯಮಿಗಳ ಪರಿಸರ ವ್ಯವಸ್ಥೆಗೆ ಇದು ಲಾಭದಾಯಕವಾಗಲಿದೆ.

ಡಬ್ಲ್ಯೂ ಇಪಿ ಪ್ಲಾಟ್ ಫಾರ್ಮ್ ನಲ್ಲಿರುವ `ಸಮುದಾಯ' ಹೊಸ ಉದ್ಯಮಗಳನ್ನು ಸ್ಥಾಪಿಸುವ ನಿಟ್ಟಿನಲ್ಲಿ (ವ್ಯವಹಾರಗಳ ನೋಂದಾವಣಿ, ಜಿಎಸ್ ಟಿ, ಧನ ಸಹಾಯ, ಸಾಂಕ್ರಾಮಿಕ ಪರಿಣಾಮಗಳು ಇತ್ಯಾದಿ) ಅಥವಾ ಈಗಾಗಲೇ ಪ್ರಗತಿಯಲ್ಲಿರುವ ಅನೇಕ ಅಂಶಗಳ ಬಗ್ಗೆ ಪ್ರಶ್ನೆಗಳನ್ನು ಹೊಂದಿರುವ ಅಥವಾ ಸ್ಪಷ್ಟೀಕರಣಗಳನ್ನು ಪಡೆಯುವ ನಿಟ್ಟಿನಲ್ಲಿ ಜ್ಞಾನವನ್ನು ಬಯಸುವ ಮಹಿಳಾ ಉದ್ಯಮಿಗಳನ್ನು ಸಂಪರ್ಕಿಸುವ ಗುರಿಯನ್ನು ಇದು ಹೊಂದಿದೆ. ಸ್ಥಾಪಿತ ವ್ಯವಹಾರಗಳ: ವ್ಯವಹಾರಗಳನ್ನು ಸ್ಥಾಪಿಸುವ ಅನುಭವವನ್ನು ಹೊಂದಿರುವ ಮಹಿಳಾ ಉದ್ಯಮಿಗಳನ್ನು ಒದಗಿಸುವ ಜ್ಞಾನಕ್ಕೆ ಮತ್ತು ಪ್ರಶ್ನೆಗಳನ್ನು ಪರಿಹರಿಸುವ ನಿಟ್ಟಿನಲ್ಲಿ ಕೊಡುಗೆಯನ್ನು ನೀಡಬಹುದಾಗಿದೆ.

ಈ ಬಗ್ಗೆ ಮಾತನಾಡಿದ ನೀತಿ ಆಯೋಗದ ಸಿಇಒ ಅಮಿತಾಬ್ ಕಾಂತ್ ಅವರು, ``ಮಹಿಳಾ ಉದ್ಯಮಿಗಳು ಮಾಹಿತಿ ಮತ್ತು ಬೆಂಬಲವನ್ನು ಪಡೆಯುವುದಲ್ಲದೇ, ಪರಸ್ಪರ ಸಹಾಯ ಮಾಡುವ ನಿಟ್ಟಿನಲ್ಲಿ ಈ ಡಬ್ಲ್ಯೂ ಇಪಿ ಒಂದು ಡಿಜಿಟಲ್ ತಾಣವಾಗಲಿದೆ ಎಂಬುದು ನನ್ನ ಆಶಯವಾಗಿದೆ. ಜನರ ಧ್ವನಿಯನ್ನು ಕೇಳುವ ನಿಟ್ಟಿನಲ್ಲಿ ಒಂದು ವೇದಿಕೆಯಾಗಿ ಸೇವೆ ಸಲ್ಲಿಸುವುದು- ಜನರ ಅಗತ್ಯತೆಗಳಿಗೆ ತಕ್ಕಂತೆ ಇರುವ ನೀತಿಗಳು ಮತ್ತು ಕಾರ್ಯಕ್ರಮಗಳನ್ನು ತಿಳಿಸಲು ಇದು ಸಹಾಯ ಮಾಡುತ್ತದೆ" ಎಂದು ಅಭಿಪ್ರಾಯಪಟ್ಟರು.

ಫ್ಲಿಪ್ ಕಾರ್ಟ್ ಗ್ರೂಪ್ ನ ಸಿಇಒ ಕಲ್ಯಾಣ್ ಕೃಷ್ಣಮೂರ್ತಿ ಅವರು ಮಾತನಾಡಿ, ``ಫ್ಲಿಪ್ ಕಾರ್ಟ್ ನಲ್ಲಿ ನಾವು ರೂಪಿಸುವ ಎಲ್ಲಾ ಕಾರ್ಯಕ್ರಮದಲ್ಲಿಯೂ ತಂತ್ರಜ್ಞಾನ ಮತ್ತು ನಾವೀನ್ಯತೆ ಇರುತ್ತದೆ. ಸ್ವದೇಶಿ ಕಂಪನಿಯಾಗಿ ಸ್ಥಳೀಯ ಮಟ್ಟದ ಭಾರತೀಯ ವ್ಯವಹಾರಗಳು, ಎಂಎಸ್ಎಂಇಗಳು ಮತ್ತು ಸ್ಟಾರ್ಟಪ್ ಗಳೊಂದಿಗೆ ನಮ್ಮ ನಿರಂತರವಾದ ಮತ್ತು ತೀವ್ರವಾದ ಪಾಲ್ಗೊಳ್ಳುವಿಕೆಯು ಅವರ ಸವಾಲುಗಳು ಮತ್ತು ಅಗತ್ಯತೆಗಳನ್ನು ಚೆನ್ನಾಗಿ ಅರ್ಥ ಮಾಡಿಕೊಳ್ಳಲು ನಮಗೆ ಸಹಾಯ ಮಾಡಿದೆ. ಇಂದು

ಸ್ಥಳೀಯವಾಗಿ ಅಭಿವೃದ್ಧಿ ಹೊಂದಿದ ತಂತ್ರಜ್ಞಾನಗಳೊಂದಿಗೆ ಅವರ ಮಹತ್ವಾಕಾಂಕ್ಷೆಯನ್ನು ನಾವು ದೊಡ್ಡ ಮಟ್ಟದ ಗ್ರಾಹಕ ಮಾರುಕಟ್ಟೆಗೆ ಪ್ರವೇಶಿಸುವ ಮೂಲಕ ಮತ್ತು ಅವರ ಅನುಭವಗಳಿಗೆ ಅನುಕೂಲವಾಗುವ ರೀತಿಯಲ್ಲಿ ನಮ್ಮ ಸಾಮರ್ಥ್ಯವನ್ನು ತರುವ ಮೂಲಕ ನಾವು ಸನ್ನದ್ಧಗೊಳಿಸಬಹುದಾಗಿದೆ. ಮಹಿಳಾ ಉದ್ಯಮಶೀಲತೆ ಪ್ಲಾಟ್ ಫಾರ್ಮ್ ಮಹಿಳಾ ನೇತೃತ್ವದ ವ್ಯವಹಾರಗಳನ್ನು ಅವರ ಬೆಳವಣಿಗೆಯ ಮಹತ್ವಾಕಾಂಕ್ಷೆಯಲ್ಲಿ ಮತ್ತು ಸಬಲೀಕರಣಗೊಳಿಸುವಲ್ಲಿ ನಿರ್ಣಾಯಕ ಪಾತ್ರವನ್ನು ವಹಿಸುತ್ತಿದೆ. ಅವರ ಯಶಸ್ಸಿನ ಪ್ರಯಾಣವನ್ನು ಶಕ್ತಗೊಳಿಸುವ ನಿಟ್ಟಿನಲ್ಲಿ ನೀತಿ ಆಯೋಗದೊಂದಿಗೆ ನಾವು ಪಾಲುದಾರರಾಗಲು ಎಲ್ಲಾ ರೀತಿಯ ಸೌಲಭ್ಯಗಳನ್ನು ಹೊಂದಿದ್ದೇವೆ" ಎಂದು ತಿಳಿಸಿದರು.

ಎಫ್ಐಸಿಸಿಐನ ನಿಕಟಪೂರ್ವ ಅಧ್ಯಕ್ಷೆ ಡಾ.ಸಂಗೀತಾ ರೆಡ್ಡಿ ಅವರು ಮಾತನಾಡಿ, ``FICCI – FLO ಸಬಲೀಕರಣ ಗ್ರೇಟರ್ 50% ಕಾರ್ಯಕ್ರಮವು ಅಗತ್ಯವಾದ ಮತ್ತು ಆಧಾರಿತವಾದ ಮಾರ್ಗದರ್ಶನ ಕಾರ್ಯಕ್ರಮಗಳು ಮತ್ತು ಮಾರ್ಗದರ್ಶಕಗಳ ಮೂಲಕ ಅಸ್ತಿತ್ವದಲ್ಲಿರುವ ಹಾಗೂ ಮಹತ್ವಾಕಾಂಕ್ಷೆಯ ಮಹಿಳಾ ಉದ್ಯಮಿಗಳ ಉದ್ಯಮಶೀಲತೆ ಹಾಗೂ ನಿರ್ಧಾರಗಳನ್ನು ತೆಗೆದುಕೊಳ್ಳುವ ಕೌಶಲ್ಯಗಳನ್ನು ಹೆಚ್ಚಿಸಲು ವಿಶೇಷವಾದ ಆದ್ಯತೆಯನ್ನು ನೀಡುತ್ತದೆ. ನೀತಿ ಆಯೋಗದ ಮಹಿಳಾ ಉದ್ಯಮಶೀಲತೆ ಪ್ಲಾಟ್ ಫಾರ್ಮ್ ಭಾರತದ ವಿವಿಧ ಭಾಗಗಳ ಮಹಿಳೆಯರನ್ನು ಒಂದೇ ವೇದಿಕೆಯಡಿಯಲ್ಲಿ ಯಶಸ್ವಿಯಾಗಿ ಒಗ್ಗೂಡಿಸುತ್ತಿದೆ. ಅಲ್ಲದೇ ಈ ಏಕೀಕೃತ ಪ್ರವೇಶದ ಪ್ಲಾಟ್ ಫಾರ್ಮ್ ಗ್ರೇಟರ್ 50 % ನ ಸಹಯೋಗವು ದೇಶಾದ್ಯಂತ ಮಹಿಳೆಯರಿಗೆ ಹೊಸ ವ್ಯಾಪಾರ ಅವಕಾಶಗಳನ್ನು ಅನ್ ಲಾಕ್ ಮಾಡಲು ಹಾಗೂ ಅವರ ಉದ್ಯಮಶೀಲತೆಯ ಅಭಿಲಾಷೆಗಳನ್ನು ಸಾಕಾರಗೊಳಿಸುವ ನಿಟ್ಟಿನಲ್ಲಿ ಮಹತ್ವದ ಹೆಜ್ಜೆಯಾಗಿದೆ. ಈ ಕಾರಣದಿಂದ ನಾವು ಈ ಪಾಲುದಾರಿಕೆಯನ್ನು ಗೌರವಿಸುತ್ತೇವೆ. ಭಾರತದ ಮಹಿಳೆಯರಿಗೆ ತಮ್ಮ ಅತ್ಯುತ್ತಮವಾದ ಸ್ವರೂಪವನ್ನು ಸೃಷ್ಟಿಸಿಕೊಳ್ಳಲು ಹೆಚ್ಚಿನ ಶಕ್ತಿಯನ್ನು ನೀಡಲು ನಾವು ಎಲ್ಲಾ ರೀತಿಯ ಪ್ರಯತ್ನಗಳನ್ನು ಮಾಡುತ್ತಿದ್ದೇವೆ. ಒಟ್ಟಾರೆ, ದೇಶದ ಮಹಿಳೆಯರ ನೇತೃತ್ವದಲ್ಲಿ ಅಭಿವೃದ್ಧಿಗೆ ಸಹಕರಿಸುತ್ತೇವೆ" ಎಂದು ಘೋಷಿಸಿದರು.

ಈ ಪ್ಲಾಟ್ ಫಾರ್ಮ್ ನಲ್ಲಿರುವ `ಸಮುದಾಯ' ಎಂಬ ಪುಟವು ಈಗ ಪರಿಷ್ಕಾರಗೊಂಡಿದ್ದು, ಮುಖಪುಟ ಮತ್ತು ಲಾಗಿನ್ ನಲ್ಲಿ ಹೊಸ ಅನುಭವವನ್ನು ನೀಡುತ್ತದೆ. ಇದನ್ನು ಲಾಗಿನ್ ಫಾರ್ಮ್ ಅನ್ನು ಹೆಚ್ಚು ಅರ್ಥಗರ್ಭಿತವನ್ನಾಗಿ ಮಾಡಲಾಗಿದೆ. ಗೂಗಲ್ ಅಥವಾ ಫೇಸ್ ಬುಕ್ ಮೂಲಕ ಇದನ್ನು ಪ್ರವೇಶಿಸಬಹುದಾಗಿದೆ. #VocalForLocal ಉಪಕ್ರಮದೊಂದಿಗೆ ಸೇರ್ಪಡೆ ಮಾಡಲಾಗಿರುವ ಅನೇಕ ಪ್ರಾದೇಶಿಕ ಭಾಷೆಗಳಲ್ಲಿ ಈ ಪ್ಲಾಟ್ ಫಾರ್ಮ್ ಲಭ್ಯವಿದ್ದು, ಮಹಿಳೆಯರಿಗೆ ಸಹವರ್ತಿ ಮಹಿಳಾ

ಉದ್ಯಮಿಗಳು ಮತ್ತು ಮಾರ್ಗದರ್ಶಕರೊಂದಿಗೆ ಅವರದ್ದೇ ಆದ ಭಾಷೆಯಲ್ಲಿ ಸಂವಹನ ನಡೆಸಲು ಅವಕಾಶ ಕಲ್ಪಿಸುತ್ತದೆ.

ಪರಿಷ್ಕರಿಸಿರುವ ಈ ಪೋರ್ಟಲ್ ಉದ್ಯಮಿಗಳು ಪರಸ್ಪರ ಕಲಿಕೆಯನ್ನು ಬೆಳೆಸಲು ತಮ್ಮ ಉದ್ಯಮಶೀಲತೆಯ ಪಯಣ, ಕಥೆಗಳು ಮತ್ತು ಅನುಭವಗಳನ್ನು ಹಂಚಿಕೊಳ್ಳಲು ಪ್ರೋತ್ಸಾಹ ನೀಡುತ್ತದೆ. ಡಬ್ಲ್ಯುಇಪಿ ಪ್ಲಾಟ್ ಫಾರ್ಮ್ ಬದಲಾವಣೆಯ ಪೋಷಕನಾಗಿ, ಸಂಭಾವ್ಯ ಮಹಿಳಾ ಉದ್ಯಮಿಗತಳಲ್ಲಿ ಉದ್ಯಮಶೀಲತಾ ಮನೋಭಾವವನ್ನು ಉತ್ತೇಜಿಸುವ ನಿಟ್ಟಿನಲ್ಲಿ ಆಫ್ ಲೈನ್ ಉಪಕ್ರಮಗಳು ಮತ್ತು ಕಾರ್ಯಕ್ರಮಗಳನ್ನು ಪ್ರೋತ್ಸಾಹಿಸುತ್ತದೆ. ಈ ಒಂದು ಪ್ರಕ್ರಿಯೆಯಲ್ಲಿ ಮಾರ್ಗದರ್ಶಕ ಕಾರ್ಯಕ್ರಮಗಳು ಹಾಗೂ ಮಾರ್ಗದರ್ಶಕ ಹೊಂದಾಣಿಕೆಯ ಆಧಾರದ ಮೇಲೆ ಮಹಿಳೆಯರ ಉದ್ಯಮಶೀಲತೆ ಮತ್ತು ನಿರ್ಧಾರ ತೆಗೆದುಕೊಳ್ಳುವ ಕೌಶಲ್ಯಗಳನ್ನು ಹೆಚ್ಚಿಸುವ ನಿಟ್ಟಿನಲ್ಲಿ ವಿಶೇಷವಾದ ಒತ್ತು ನೀಡಲು ಎಫ್ಐಸಿಸಿಐ ನೀತಿ ಆಯೋಗ ಮತ್ತು ಡಬ್ಲ್ಯುಇಪಿಯನ್ನು ಬೆಂಬಲಿಸುತ್ತದೆ. ಈ ಜಂಟಿ ಪ್ರಯತ್ನದಿಂದಾಗಿ ಮಹಿಳಾ ಉದ್ಯಮಿಗಳನ್ನು ಮತ್ತಷ್ಟು ಸಬಲಗೊಳಿಸುತ್ತದೆ ಹಾಗೂ ಅವರಿಗೆ ಸೂಕ್ತವಾದ ಪರಿಸರ ವ್ಯವಸ್ಥೆಯನ್ನು ಕಲ್ಪಿಸುತ್ತದೆ.

**About Women Entrepreneurship Platform (WEP)**

The Women Entrepreneurship Platform (WEP) is a first of its kind, unified access portal which brings together women from different parts of India to build a nurturing ecosystem that enables them to realize their entrepreneurial aspirations. WEP achieves this by facilitating relevant information and services through key partnerships.The idea of the Platform was first proposed by Shri Amitabh Kant, CEO, NITI Aayog who announced the WEP at the conclusion of the 8th Global Entrepreneurship Summit(GES) in 2017, to help resolve the information asymmetry that exists in the ecosystem. As an aggregator platform, WEP hosts information and services relevant to women entrepreneurs. WEP enables key partnerships to bring crucial content, workshops, campaigns and other avenues of learning and growth to its users from trailblazers in the industry.

**About the Flipkart Group**

The Flipkart Group is one of India's leading digital commerce entities and includes group companies Flipkart, Myntra, and Flipkart Wholesale. Started in 2007, Flipkart has enabled millions of consumers, sellers, merchants, and small businesses to be a part of India's e-commerce revolution, with a registered customer base of over 300 million, offering over 150 million products across 80+ categories. Our efforts to democratize e-commerce in India, drive access and affordability, delight customers, create lakhs of jobs in the ecosystem and empower generations of entrepreneurs and MSMEs have inspired us to innovate on many industry firsts. The recent launch of Flipkart Wholesale, our new digital marketplace, is a testament to our commitment to accelerate the growth of kiranas and MSMEs in India. Flipkart is known for pioneering services such as Cash on Delivery, No Cost EMI and easy returns – customer-centric innovations that have made online shopping more accessible and affordable for millions of Indians. Together with Myntra, which holds a prominent position in the online fashion market, and now Flipkart Wholesale, the Flipkart Group will continue to steer the transformation of commerce in India through technology.

For more information, please contact media@flipkart.com

**About FICCI-FLO Empowering the Greater 50% campaign**

With the vision of empowering the pivotal segment of India today as a nation — the greater 50% — women, at every level of the economy and enterprise, FICCI & FICCI Ladies Organization have launched a mega mission called 'Empowering the Greater 50%'. This ambitious mission is designed to SUPPORT,EMPOWER AND INSPIRE women in all walks of life to step forward and be the best forms of themselves as possible with special focus on enhancing entrepreneurial and decision-making skills of women through various offerings. These include: Training for Workplace inclusion, Training of Women in Corporate Boards, Digital Financial Literacy, Mentorship, Enterprise development, Skilling and Capacity Building, Legal Empowerment of women at grassroot level, awareness of basic legal rights at workplace, livelihood interventions through CSR, Webinars on women centric issues, thought leadership to formulate guidelines for women at workplace, Inspirational Talks for girl students to pursue STEM education, Mental Health and wellness workshops, and special acknowledgment to women led / women focused positive stories and interventions. Launched in the month of June 2020, the programme aspires to touch the lives of at least 1,00,000 women over a period of three years.